ಸಾಕ್ಷಿಯನ್ನು ದಿನಾಂಕಃ **07-03-2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಎಸ್ ಜಿ ಹೆಚ್., ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಅಫಿಡವಿಟ್ ಮುಖಾಂತರ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ವಿಚಾರ ನನ್ನ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಕ್ಕೆ ಸರಿ ಇದೆ.

ದಿನಾಂಕಃ 08-12-2025 ರ ಅಲಭ್ಯ ಪ್ರಮಾಣ ಪತ್ರ **ನಿಪಿ.1** ಎಂದು, ಅರ್ಜಿದಾರರ ಆಧಾರ ಕಾರ್ಡ, ಅರ್ಜಿದಾರರ ತಾಯಿಯ ಆಧಾರ ಕಾರ್ಡ, ಅರ್ಜಿದಾರರ ತಂಗಿಯ ಆಧಾರ ಕಾರ್ಡ, ಅರ್ಜಿದಾರರ ಇನ್ನೊಂದು ತಂಗಿಯ ಅಧಾರ ಕಾರ್ಡ ಇವುಗಳ ನೋಟರೈಸ್ಡ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ ನೋಡಿ ಕ್ರಮವಾಗಿ **ನಿಪಿ.2** ಮತ್ತು **ನಿಪಿ.5** ಎಂದು, ದಿನಾಂಕ 05-03-2026 ರ ಕನ್ನಡ ಜನಾಂತರಂಗ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು **ನಿಪಿ.6** ಮತ್ತು ಪ್ರಕಟಣೆ ಭಾಗವನ್ನು **ನಿಪಿ.6(ಎ)** ಎಂದು, ವಂಶವೃಕ್ಷದ ಪ್ರಮಾಣ ಪತ್ರವನ್ನು **ನಿಪಿ.7** ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿ.

**ಎದುರುದಾರರು ಏಕಪಕ್ಷೀಯವಾಗಿ ಉಳಿದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**C/c. ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**